# ಅಂಚೆ ಮತ್ತು ತೆರಪಿನ ಶಿಕ್ಷಣ

## ತೃತೀಯ ಬಿ.ಎ. ಪದವಿ ಪರೀಕ್ಷೆ, ಆಗಸ್ಟ್ / ಸೆಪ್ಟೆಂಬರ್ 2009

## ಕನ್ನಡ ಐಚ್ಛಿಕ ಪತ್ರಿಕೆ ಯು.ಕೆ. - ೫

## (ಹಳಗನ್ನಡ ವ್ಯಾಕರಣ ಮತ್ತು ಕನ್ನಡ ಭಾಷೆಯ ಚರಿತ್ರೆ)

ಅಂಕಗಳು : 70 ಅಂಕಗಳು

ಸಮಯ : 3 ಗಂಟೆಗಳು

### 'ಅ' ವಿಭಾಗ

### (ಹಳಗನ್ನಡ ವ್ಯಾಕರಣ)

1. ಕೆಳಗಿನ ಒಂದು ಸೂತ್ರಕ್ಕೆ ವ್ಯಾಖ್ಯಾನ ಬರೆಯಿರಿ. 06

೧) ಏಕದ್ವಿತ್ವ ಬಹುತ್ವಮ
ನೇಕದ್ವಿ ಬಹುತ್ವ ವಸ್ತುಗಳ್ಗಾಚರಿಪರ್
ಸ್ವೀಕಾರಂ ಕನ್ನಡದೊಳ
ಗೇಕ ಬಹುತ್ವಂ ದ್ವಿವಚನಮುಚಿತದೆ ಬರ್ಕುಂ ॥

೨) ಎರಡುಂ ರೇಫೆಗಳಂ ತಂ
ದುರವಣೆಯಿಂ ಕೂಡಿದಂತೆ ವೋಲ್ ಶ್ರುತಿ ಕಷ್ಟಂ
ಬರೆ ಸಂಧಿ ಮಾಡಲಾಗದು
ಕರಡೆಯ ಗಿರ್ಗಟದ ದನಿವೊಲಮರವೆಂದುಂ ॥

2. ಕೆಳಗಿನ ಸೂತ್ರ ಭಾಗಗಳಲ್ಲಿ ಎರಡಕ್ಕೆ ಉದಾಹರಣೆಯೊಂದಿಗೆ ವಿವರಿಸಿ. 06

೧) ಕಹಳೆಯ ಪಾಂಗಿನವೊಲ್ ಶಬ್ದ ದ್ರವ್ಯಂ ಜನಿಯಿಸುಗುಂ

೨) ಪರಿಭಾವಿಸೆ ಯೋಗ ವಾಹಮವುನಾಲ್ಕೆವಲಂ

೩) ಅಸಹ್ಯವೃತ್ತಿಯೊಳ್ ತಾಂ ಬಹುತ್ವಮೇಕತ್ವದೊಳಂ

೪) ನಾಮರೂಢಿಯಬುಯದಪಕ್ಷಂ

3. ಕೆಳಗಿನ ಎರಡರ ವ್ಯಾಕರಣ ವಿಶೇಷಗಳನ್ನು ಬರೆಯಿರಿ. 06

೧) ತಿಳಿಗೊಳದಿಂದೆ ಪಾಱುದುವು ಹಂಸಕುಳಂ

೨) ಅಮರಾಂಗನೆಯರ್ ಜೋಯೆಂದು ಪಾಡಿದರ್ ಜೋಗುಳಮಂ

೩) ಅಯ್ಯೋ ಅಕ್ಕಟಾ ಇಂದ್ರಂಗೆಕೇಡಾಯ್ತೆ

೪) ಪೊನ್ನುಳ್ಳವನೆಕುಲೀನಂ

4. ಎರಡಕ್ಕೆ ಟಿಪ್ಪಣಿ ಬರೆಯಿರಿ. 04

ಮಹಾಪ್ರಾಣಾಕ್ಷರಗಳು, ಶ್ರಾವಣ-ಚಾಕ್ಷುಷ, ನಾಮಿ, ಪ್ಲುತ

5. ಎರಡು ಪ್ರಶ್ನೆಗಳಿಗೆ ಉತ್ತರಿಸಿ. 9 x 2=18

೧) 'ನಾಲ್ವತ್ತೇಳಾಯ್ತುಳೆ ಶುದ್ಧಗೆಯಚ್ಚಗನ್ನಡಕ್ಕೀಕ್ರಮದಿಂ' - ಕೇಶಿರಾಜನ ಈ ಹೇಳಿಕೆಯನ್ನು ಚರ್ಚಿಸಿ.

೨) 'ಲಿಂಗಮೊಂಬತ್ತು ತೆಱಂ' ಕೇಶಿರಾಜನ ಲಿಂಗವಿವಕ್ಷೆಯ ಔಚಿತ್ಯವನ್ನು ವಿವರಿಸಿ.

೩) ಸಂಧಿ ಎಂದರೇನು? ಲೋಪ-ಆಗಮ ಸಂಧಿಗಳನ್ನು ಕುರಿತು ಬರೆಯಿರಿ.

೪) ಸಮಾಸ ಎಂದರೇನು? ಬಹುವ್ರೀಹಿ, ದ್ವಂದ್ವ, ಅಂಶಿಸಮಾಸಗಳನ್ನು ಉದಾಹರಣೆಗಳೊಂದಿಗೆ ವಿಶ್ಲೇಷಿಸಿ.

## 'ಆ' ವಿಭಾಗ

## (ಕನ್ನಡ ಭಾಷೆಯ ಚರಿತ್ರೆ)

6. ಎರಡು ಪ್ರಶ್ನೆಗಳಿಗೆ ಉತ್ತರ ಬರೆಯಿರಿ. 8 + 8=16

೧) ಭಾಷೆ ಎಂದರೇನು? ಉಗಮ-ವಿಕಾಸ ಮತ್ತು ಲಕ್ಷಣಗಳನ್ನು ವಿಶ್ಲೇಷಿಸಿ.

೨) ಕನ್ನಡ ಶಬ್ದದ ವ್ಯುತ್ಪತ್ತಿ, ನಾಡುನುಡಿಗಳ ಪ್ರಾಚೀನತೆ ತಿಳಿಸಿರಿ.

೩) ಪ್ರಾಂತಭೇದ ಎಂದರೇನು? ಪ್ರಾಂತಭೇದಗಳುಂಟಾಗಲು ಕಾರಣಗಳಾವುವು? ಚರ್ಚಿಸಿ.

7. ಎರಡನ್ನು ಕುರಿತು ಸಂಕ್ಷಿಪ್ತವಾಗಿ ಬರೆಯಿರಿ. 4 + 4=8

೧) ಕ್ರಿಯಾಪದ

೨) ಅವ್ಯಯಗಳು

೩) ಸರ್ವನಾಮಗಳು

8. ಮೂರಕ್ಕೆ ಭಾಷಾ ವಿಜ್ಞಾನದ ದೃಷ್ಟಿಯಿಂದ ಟಿಪ್ಪಣಿ ಬರೆಯಿರಿ. 6

೧) ಎಳ್ಳೆಣ್ಣೆ

೨) ಕಬ್ಬಿಣ

೩) ಉಡುಗೊರೆ

೪) ಆಕಳು

೫) ಗುಂಡುಸೂಜಿ

* * *